## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

**ಸೇಡಂ**

ಸಿ.ಸಿ. ನಂಃ 420/2017 ಸಿಡಬ್ಲೂ ಃ 11 ಪಿಡಬ್ಲೂಃ 07

ಪ್ರಮಾಣವಚನ ಬೋಧಿಸಲಾಯಿತು ದಿಃ 31-07-2026

ಹೆಸರು ಃ ನಟರಾಜ

ತಂದೆ ಹೆಸರು ಃ ಶ್ರವಣ ಕುಮಾರ

ವಯಸ್ಸು ಃ 42 ವರ್ಷ

ಉದ್ಯೋಗ ಃ PI ಗ್ರಾಮೀಣ ಪೋಲಿಸ ಠಾಣೆ ಕಲಬುರಗಿ ನಗರ

ವಾಸಸ್ಥಳ ಃ ಕಲಬುರಗಿ

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ**

ನಾನು ದಿಃ 02.03.2017 ರಿಂದ 30.03.2018 ವರೆಗೆ ಸೇಡಂ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪ ನಿರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿಃ 23.03.2017 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-10 ರವರಿಂದ ಪಡದೆಕೊಂಡು ಪರೀಶಿಲಿಸಲಾಗಿ ಅದೇ ದಿನ ಪ್ರಕರಣದಲ್ಲಿ ಗಾಯಾಳುದಾರರಾದ ಚಾಸಾ-1 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳು ಚಾಸಾ-9 ರವರಿಂದ ಪಡೆದುಕೊಂಡು ಕಡತಕ್ಕೆ ಅಚವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರಗಳು ಈಗ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಮತ್ತು ನಿಪಿ-5(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಆರೋಪಿತರು ಮಾನ್ಯ ನ್ಯಾಯಾಲಯದಿಂದ ನೀರಕ್ಷಣ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಅವರ ಮೇಲೆ ದಸ್ತಗಿರ ಕ್ರಮವನ್ನು ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸದರಿ ಪ್ರಕರಣದದಲ್ಲಿ ತನಿಖೆ ಪೂರ್ಣಗೊಂಡಿರುವುದರಿಂದ ದಿಃ 23.03.2017 ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ ಃ

ನಿಪಿ-4 ಮತ್ತು 5 ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ದಾಖಲಾತಿಯನ್ನು ಸೃಷ್ಟಿ ಸುಳ್ಳು ಅಂತಿಚು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ ದಂ. ಸೇಡಂ.**